ಉಂಟಾಗಿದೆ. ಅಲ್ಲಿ ಬಡವರಿಗೆ ಯಾವ ಜೀವನಕ್ಕೂ ಆಧಾರವಿಲ್ಲದೇ ಇರುವುದರಿಂದ ತಮ್ಮ ಭೂಮಿಯನ್ನು ಈಗ ಏನು ಸಾಗುವಳಿ ಮಾಡುತ್ತಿದ್ದಾರೋ ಅವರ ಜಮೀನನ್ನು ಅರಣ್ಯ ಇಲಾಖೆಯವರು ಸೋಷಲಿಸ್ಟ್ ಫಾರೆಸ್ಟ್ ಮಾಡುವ ಉದ್ದೇಶದಿಂದ ಆ ಜಮೀನಿನಲ್ಲಿ ಅವರು ಏನು ಗಂಡಿಸಲುಗಳನ್ನು ಹಾಕಿಕೊಂಡಿದ್ದರೋ ಅದನ್ನು ತೆಗೆದು ಹಾಕಿ ಸಸಿಗಳನ್ನು ಹಾಕತಕ್ಕಂಥಾ ಕೆಲಸಗಳನ್ನು ಮಾಡುತ್ತಿದ್ದಾರೆ. ಆ ಬಡವರನ್ನು ಆ ಭೂಮಿಯಿಂದ ಹೊರಕ್ಕೆ ಹಾಕಿದ್ದಾರೆ. ಒಂದು ವೇಳೆ ಅವರ ಭೂಮಿಯನ್ನು ಏನಾದರೂ ಪರಿಶೀಲಿಸುವುದಕ್ಕೆ ಹೋದಾಗ ಅವರಿಗೆ ಆ ಭೂಮಿಯೇ ಇರುವುದಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಈಗ ಅಲ್ಲಿ ಪಿಟ್ಸ್ ತೆಗೆದು ಅವರು ಸಸಿಗಳನ್ನು ನೆಡತಕ್ಕಂಥಾ ಕಾರ್ಯವನ್ನು ಏನು ಮಾಡುತ್ತಿದ್ದಾರೋ ಅದನ್ನು ಸ್ಥಗಿತಗೊಳಿಸಿ ಆದಷ್ಟು ಅವರ ಜಮೀನನ್ನು ಪರಿಶೀಲಿಸಿ ಅವರ ಜಮೀನನ್ನು ಅವರಿಗೇನೇ ಮಂಜೂರು ಮಾಡಿಕೊಡುವ ಹಾಗೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಅದರ ಬಗ್ಗೆ ಈಗ ಹೇಳಿದಂಥಾ ಉದಾಹರಣೆಗಳನ್ನು ನಾನು ಗವರ್ನಮೆಂಟಲ್ಲಿಟ್ಟುಕೊಳ್ಳುತ್ತೇನೆ.

## ಬೆಳ್ತಂಗಡಿ ತಾಲ್ಲೂಕಿನ ರೈತರಿಂದ ಬರಬೇಕಾಗಿರುವ ಸಹಕಾರ ಭೂ ಅಭಿವೃದ್ಧಿ ಬ್ಯಾಂಕಿನ ಸಾಲ ವಸೂಲಾತಿ ಬಗ್ಗೆ.

*೩೮೯. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಳ್ತಂಗಡಿ ತಾಲ್ಲೂಕಿನ ರೈತರು ಭೂ ಅಭಿವೃದ್ಧಿಗಾಗಿ ಮಾಡಿದ ಸಾಲವು ಬಾಕಿಯಾದ ಸಂಧರ್ಭದಲ್ಲಿ ಜಪ್ತಿ ಮಾಡಬೇಕೆಂಬ ಆದೇಶವನ್ನು ಸರ್ಕಾರದವರು ಭೂ ಅಭಿವೃದ್ಧಿ ಬ್ಯಾಂಕಿನವರಿಗೆ ನೀಡಿದ್ದಾರೆಯೇ?

(ಆ) ಮೇಲಿನ ವಿಚಾರದಲ್ಲಿ ಸದರಿ ರೈತರು ಕೊಟ್ಟ ಮನವಿಯ ಮೇಲೆ ಕೈ ಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ೧೯೫೯ನೇ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ ೫೬(ಎ) ಪ್ರಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಮಂಜೂರು ಮಾಡಿದ ಸಾಲಗಳು ಬಾಕಿ ಆದಲ್ಲಿ ಅಂತಹ ಸಾಲಗಳನ್ನು ಬಡ್ಡಿ ಮತ್ತು ಖರ್ಚಿನೊಂದಿಗೆ ವಸೂಲಿ ಮಾಡಬೇಕಾಗುತ್ತದೆ. ಈ ಕಾಯಿದೆಯ ಉಪಬಂಧದಡಿ ಸ್ಥಿರಸ್ವತ್ತುಗಳನ್ನು ಜಪ್ತಿ ಮಾಡುವಾಗ ಅವಾರ್ಡನ್ನು ಅಮಲ್‌ಜಾರಿ ಮಾಡುವಾಗ ಸಾಧ್ಯವೇ ವಿನಃ ಮತ್ತಾವ ಸಂದರ್ಭದಲ್ಲೂ ಮಾಚಲಾಗುವುದಿಲ್ಲ.

(ಆ) ಲಭ್ಯವಿರುವ ಮಾಹಿತಿ ಪ್ರಕಾರ ಈ ಬಗ್ಗೆ ಯಾವ ಮನವಿಯೂ ಸರ್ಕಾರಕ್ಕೆ ಬಂದಿರುವುದಿಲ್ಲ. ಅಂತಹ ಮನವಿಗಳು ಬಂದಲ್ಲಿ ಅವುಗಳ ಗುಣವಾಗುಣಗಳನ್ನು ಪರ್ಯಾಲೋಚಿಸಲಾಗುತ್ತದೆ.

ಶ್ರೀ ಕೆ. ವಸಂತ ಬಂಗೇರ,—ರೈತರು ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲ ಮಾಡಿ ಆ ಸಾಲವನ್ನು ಬಾಕಿ ಉಳಿಸಿಕೊಂಡಿದ್ದರೆ ಅಂಥವರ ಸ್ವತ್ತುಗಳನ್ನು ಜಪ್ತಿ ಮಾಡುವುದಕ್ಕೆ ಆದೇಶ ಏನಾದರೂ ಕೊಟ್ಟಿದ್ದೀರಾ? ನಾನು ಈ ಮಾತನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ ಒಂದು ಕಡೆ ರೈತರಿಗೆ ಇದರ ಬಗ್ಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ, ಇನ್ನೊಂದು ಕಡೆ ನೋಡಿದರೆ ಜಪ್ತಿ ಮಾಡುವುದಕ್ಕೆ ಹೇಳಿದ್ದೀರಿ. ಆದುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ, ಅವರಿಗೆ ಜಪ್ತಿ ಮಾಡಬಾರದು ಎಂದು ಆದೇಶ ಕೊಡುತ್ತೀರಾ?

ಶ್ರೀ ಆರ್.ಎಲ್. ಜಾಲಪ್ಪ.—ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಸುಮಾರು ೧೧ ಕೋಟಿ ೩೦ ಲಕ್ಷ ರೂಪಾಯಿ ಬರಬೇಕು. ಅದರಲ್ಲಿ ಇಂತಹ ಟೆನೆಂಟ್ಸ್‌ನಿಂದ ಇನ್ನೂ ೭ ಕೋಟಿ ೮೦ ಲಕ್ಷ ರೂಪಾಯಿ ಬರಬೇಕು. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನವರು ಇಂತಹ ಟೆನೆಂಟ್ಸ್‌ಗೆ ಸಾಲ ಕೊಟ್ಟಿದ್ದರೆ ಅವರು ಪ್ರೀಮಿಯಮ್ ಹಣ ಕಟ್ಟಬೇಕಾಗಿಲ್ಲ. ಅದನ್ನು ಮಜಾ ಮಾಡಿದ್ದೇವೆ. ಆದರೆ ಆ ಅಧಿಕಾರಿಗಳು ಯಾವುದಕ್ಕೆ ಕೇಳಿದರೋ ಗೊತ್ತಿಲ್ಲ, ಆದರೆ ಸರ್ಕಾರ ಸ್ಪೆಸಿಫಿಕ್ ಆಗಿ ಆ ಹಣವನ್ನು ಅವರಿಂದ ಕೇಳಬಾರದು ಎಂದು ಏನೂ ಆರ್ಡರ್ ಹೊರಡಿಸಿಲ್ಲ. ಆ ವಿಚಾರ ಈಗ ಸರ್ಕಾರದ ಪರಿಶೀಲನೆಯಲ್ಲಿದೆ ಆ

ಹಣವನ್ನು ಸರ್ಕಾರ ತುಂಬಿಕೊಡಬೇಕಾಗಿದೆ, ಅದನ್ನು ಹೇಗೆ ಮಾಡಬೇಕೆನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಇದಕ್ಕೆ ಸರ್ಕಾರದ ಆದೇಶ ಅನಾವಶ್ಯಕ. ಏತಕ್ಕೆಂದರೆ ಅವರು ಕೊಡಬೇಕಾದ ಒಂದು ಕಂತು ಬಾಕಿ ಇದ್ದರೂ ಕೂಡ ವಸೂಲ್ಮಾಡುತ್ತಾರೆ. ಎರಡನೆಯದಾಗಿ ಸ್ಥಿರಾಸ್ತಿ ಮೇಲೆ ಸಾಲ ತೆಗೆದುಕೊಂಡಿದ್ದರೆ ಅದು ಪ್ರತ್ಯೇಕ. ಅವರಿಗೆ ಒಂದೆರಡು ಸಲ ನೋಟೀಸ್ ಕೊಟ್ಟು ಅನಂತರ ಬೇರೆ ಕ್ರಮ ತೆಗೆದುಕೊಳ್ಳುತ್ತಾರೆ. ಸರ್ಕಾರ ರೈತರ ಬಗ್ಗೆ ಒಂದು ಸಾರಿ ತೀರ್ಮಾನ ತೆಗೆದುಕೊಂಡರೆ ಆ ತೀರ್ಮಾನದಂತೆ ನಡೆಯುತ್ತದೆಯೇ ವಿನಾಃ ಅದನ್ನು ಬಿಟ್ಟು ಹೋಗುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಈಗ್ಗೆ ಒಂದು ವರ್ಷದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಮಾಜಿಗೇಣಿದಾರರಿಗೆ ಭೂ ಪರಿಹಾರ ಮನ್ನಾ ಮಾಡುತ್ತೇವೆಂದು ಹೇಳಿದರು. ಇದು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಈ ಬಗ್ಗೆ ಇನ್ನೂ ಕ್ಲಾರಿಫಿಕೇಷನ್ ನಡೆಯುತ್ತಾ ಇದೆ. ನಾನು ಈ ವಿಚಾರದಲ್ಲಿ ಕೇಳುವುದೇನೆಂದರೆ ಭೂ ಪರಿಹಾರಕ್ಕೋಸ್ಕರವಾಗಿ ರೈತರು ಪಿ.ಎಲ್.ಡಿ ಬ್ಯಾಂಕ್‌ನಿಂದ ಸಾಲ ತೆಗೆದು ಕೊಂಡಿದ್ದರೆ ೧೦ ಎಕರೆಗಿಂತ ಕಡಿಮೆ ಇರುವವರಿಗೆ ಭೂ ಪರಿಹಾರ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರಿಂದ ಅವರು ತೆಗೆದುಕೊಂಡಂಥಾ ಸಾಲವನ್ನು ಭೂಮಿ ಮೇಲೆ ಹಾಕಿದ್ದಾರೆ. ಆದು ದರಿಂದ ಅವರು ಇದರ ಬಗ್ಗೆ ಏನು ಕಂತುಗಳನ್ನು ಕಟ್ಟಬೇಕೋ ಆದು ಆಗುತ್ತಾ ಇಲ್ಲ. ಅದಕ್ಕೋಸ್ಕರ ವಾಗಿ ಏನಾದರೂ ಜಪ್ತಿ ಮಾಡಲಿಕ್ಕೆ ಸರ್ಕಾರ ಆದೇಶ ನೀಡಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ.—೧೦ ಎಕರೆಗಿಂತ ಕಡಿಮೆ ಜಮೀನು ಇರುವಂಥ ರೈತರಿಗೆ ಪ್ರೀಮಿಯಮ್ ಬಗ್ಗೆ ಮಾತ್ರ ಮಾಫಿ ಮಾಡತಕ್ಕಂಥಾ ಒಂದು ಘೋಷಣೆ ಮಾಡಿದ್ದಾರೆ. ಇದರ ಬಗ್ಗೆ ಒಂದು ಸರ್ಕ್ಯುಲರ್ ಕೂಡ ಇದೆ. ಆದರೆ ಮುಂದೆ ಅವರು ತುಂಬತಕ್ಕಂಥಾ ಕಂತುಗಳು ಏನು ಇವೆ ಅದಕ್ಕೆ ಅನ್ವಯವಾಗುತ್ತದೆ. ಆದರೆ ಅವರು ಸಾಲ ತೆಗೆದುಕೊಂಡಂಥ ಹಣದ ಕಂತಿಗೆ ಇದು ಅನ್ವಯ ವಾಗುವುದಿಲ್ಲ. ರೈತರು ಹಿಂದೆ ತುಂಬಿದಂಥ ಹಣ ಳಿ ಕೋಟಿಗಿಂತ ಹೆಚ್ಚಾಗಿದೆ. ಸರ್ಕಾರದ ಆಜ್ಞೆ ಬಂದ ಮೇಲೆ ವಸೂಲಿ ಮಾಡುವುದನ್ನು ನಿಲ್ಲಿಸಿದ್ದೇವೆ, ಹಿಂದೆ ಸರ್ಕಾರದ ಆಜ್ಞೆ ಪ್ರಕಾರ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ರೈತರಿಗೆ ಸಾಲ ಕೊಟ್ಟು ಆ ಸಾಲದ ಹಣದಿಂದ ಪ್ರೀಮಿಯಂ ಕಟ್ಟಿದ್ದಾರೆ. ಇದು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಕೊಟ್ಟಂಥ ಸಾಲ. ಮುಂದೆ ಕೊಟ್ಟಂಥ ಪ್ರೀಮಿಯಂ ಅಲ್ಲ. ಆ ರಿಕವರಿಗೂ ಈ ಕಂತಿಗೂ ಸಂಬಂಧವಿಲ್ಲ. ಮುಂದೆ ಕೊಡುವುದನ್ನು ನಿಲ್ಲಿಸಿದ್ದೇವೆ. ಹಿಂದಿನದು ಕೊಡಬೇಕಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ,—ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ, ರಾಜ್ಯದಲ್ಲಿ ೧೦ ಎಕರೆ ಒಳಗಡೆ ಇರತಕ್ಕ ಗೇಣಿದಾರರಿಗೆ ದುಡ್ಡು ಕೊಡಬೇಕಾಗಿಲ್ಲ ಎಂದು ಆರ್ಡರ್ ಹೊರಡಿಸಿದ್ದಾರೆ. ಆದರೆ ಈಗ ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶಮಾಡಿಕೊಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಹಿಂದೆ ಸುಸ್ತಿದಾರರಿಗೆ ಬಡ್ಡಿ ವಜಾ ಮಾಡಿದ್ದೇವೆ, ಅದೇರೀತಿ ಇದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ. ಈಗ ಇದನ್ನೂ ಕೊಡಿ ಎಂದರೆ ಫ್ಲಡ್‌ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—೫ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರೆ, ಎರಡು ಪ್ರೀಮಿಯಂ ಅಡ್ಜಸ್ಟ್ ಮಾಡಿದರೆ ಉಳಿದದ್ದು ಮಾಡಿಲ್ಲ. ಇದರಿಂದ ರೈತರಿಗೆ ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡಿ ಏನು ಪ್ರಯೋಜನವಾಯಿತು. ಇದನ್ನು ಕಾರ್ಯ ರೂಪಕ್ಕೆ ತನ್ನಿ ಎಂದು ಹೇಳುತ್ತಾ ಇದ್ದೇನೆ. ಆದ್ದರಿಂದ ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿ ಎಂದು ಕೇಳುತ್ತಾ ಇದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ —ನಮಗೂ ಕ್ಲಿಯರಾಗಿದೆ, ಅವರಿಗೂ ಕ್ಲಿಯರಾಗಿದೆ. ಸಂಮ್ಮನೆ ಮಲಗಿಕೊಂಡಿರುವವನ್ನು ಎಬ್ಬಿಸುವುದು ಹೇಗೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಚೊಮ್ಮಾಯಿಯವರು, ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ ನಂತರ ಕಂತು ವಸೂಲು ಮಾಡುತ್ತಾ ಇಲ್ಲ, ಹಿಂದಿನ ಬಾಕಿ ವಸೂಲು ಮಾಡುತ್ತಾ

ಇದ್ದೇವೆ ಎಂದು ಹೇಳಿದರು. ಈ ವರ್ಷ ಬೆಳ್ತಂಗಡಿಯಲ್ಲಿ ವಸೂಲಿಗಾಗಿ ಜಪ್ತಿ ನೋಟೀಸ್ ಹೋಗಿ ವಸೂಲಾಗಿದೆ. ಜನರು ಬೊಬ್ಬೆ ಇಡುತ್ತಿದ್ದಾರೆ. ನೀವು ಕಂತು ವಸೂಲು ಮಾಡುತ್ತೀರಾ ಜಪ್ತಿ ಮಾಡಿ ವಸೂಲು ಮಾಡುತ್ತೀರಾ ಹೇಗೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ವಸೂಲಿ ಮಾಡುವುದಿಲ್ಲ. ಇಂತಹ ಪ್ರಕರಣ ಎಂದು ನಿರ್ದಿಷ್ಟವಾಗಿ ನಮ್ಮ ಗಮನಕ್ಕೆ ತನ್ನಿ ನಿಲ್ಲಿಸುತ್ತೇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಏನು ಸಾಲ ತೆಗೆದುಕೊಂಡಿದ್ದಾರೆ ಅದನ್ನು ಬ್ಯಾಂಕ್‌ನವರು ವಸೂಲು ಮಾಡುತ್ತಾ ಇದ್ದಾರೆ. ಈ ಬಗ್ಗೆ ನಾವು ತಿದ್ದುಪಡಿ ಕೂಡ ತರುತ್ತಾ ಇದ್ದೇವೆ.

ಶ್ರೀ ಎಸ್. ಬಂಗಾರಪ್ಪ.—೩೦ನೇ ತಾರೀಖಿನ ದಿವಸ ಕಂದಾಯ ಇಲಾಖೆಯ ಬೇಡಿಕೆಗಳು ಬರುತ್ತಾ ಇದೆ, ಆಗ ವಿವರವಾಗಿ ಪ್ರಸ್ತಾಪ ಮಾಡುತ್ತೇನೆ. ಹೊಸದಾಗಿ ಏನೂ ವಸೂಲು ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದಿರಿ. ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ೪ ದಿವಸಗಳ ಹಿಂದೆ ನಾನು ಸಿದ್ದಾಪುರ ತಾಲ್ಲೂಕಿಗೆ ಹೋದಾಗ ಅಲ್ಲಿ ೯೨ ಲಕ್ಷ ರೂಪಾಯಿ ಹಣ ಗೇಣಿದಾರರಿಂದ ಬರಬೇಕು ಎಂದು ಅಲ್ಲಿನ ಲ್ಯಾಂಡ್ ಟ್ರಿಬ್ಯುನಲ್ ತೀರ್ಮಾನ ಮಾಡಿರತಕ್ಕದ್ದು. ೪೬ ಲಕ್ಷ ರೂಪಾಯಿಗಳಿಗೆ ಈಗಾಗಲೇ ನೋಟೀಸ್ ಕೊಟ್ಟಿದ್ದಾರೆ. ಸಿದ್ದಾಪುರ ತಾಲ್ಲೂಕು ಆಫೀಸಿನಲ್ಲಿ ಇದಕ್ಕೆ ಸಪರೇಟ್ ಬ್ರಾಂಚ್ ಮಾಡಿದ್ದಾರೆ. ಕೊಡದೇ ಹೋದರೆ ಜಪ್ತಿ ಮಾಡುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧಪಕ್ಷದ ನಾಯಕರು ಈ ವಿಚಾರವನ್ನು ಹೇಳಿದ್ದಾರೆ. ಆ ರೀತಿ ಅಧಿಕಾರಿಗಳು ಮಾಡಿದ್ದರೆ ಅಧಿಕಾರಿಗಳಿಗೆ ಸೂಕ್ತ ಆದೇಶ ಕೊಡುತ್ತೇನೆ.

ಅಧ್ಯಕ್ಷರು.—ಈಗ ೨ನೇ ಪಟ್ಟಿಯ ಪ್ರಶ್ನೆಗಳು.

## ಶ್ರೀ ಹಾಲು ರಾಮೇಶ್ವರ ಕ್ಷೇತ್ರಕ್ಕೆ ವೆಚ್ಚ ಮಾಡಲಾದ ಮೊಬಲಗು

೯೩೩. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

೧. ೧೯೮೩–೮೪ ಮತ್ತು ೧೯೮೪–೮೫ರಲ್ಲಿ ಶ್ರೀ ಹಾಲುರಾಮೇಶ್ವರ ಕ್ಷೇತ್ರಕ್ಕೆ ಮಾಡಿದ ಸಣ್ಣ ದುರಸ್ತಿಗಾಗಿ ವೆಚ್ಚವಾದ ಮೊಬಲಗೆಷ್ಟು ?

೨. ಹಾಗಿದ್ದಲ್ಲಿ ಅಧಿಕೃತ ಕನ್ವೀನರ್ ಇದ್ದರೂ ಒಬ್ಬ ಧರ್ಮದರ್ಶಿಗೆ ಸದರಿ ದುರಸ್ತಿಗಾಗಿ ಹಣ ಕೊಡುವುದರ ಔಚಿತ್ಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

೧. ೧೯೮೩–೮೪ ಮತ್ತು ೧೯೮೪–೮೫ರಲ್ಲಿ ಸಣ್ಣ ರಿಪೇರಿಗಾಗಿ ಈ ಕೆಳಕಂಡಂತೆ ಖರ್ಚಾಗಿದೆ.

| | |
|---|---|
| ೧೯೮೩–೮೪ | ೫೦೦–೦೦ ರೂ. |
| ೧೯೮೪–೮೫ | ೧೦೦೦–೦೦ ರೂ. |

೨. ಶ್ರೀ ಹಾಲುರಾಮೇಶ್ವರ ಕ್ಷೇತ್ರದ ಧರ್ಮದರ್ಶಿಯ ಅವಧಿಯು ೧–೯–೧೯೮೩ಕ್ಕೆ ಮುಗಿದಿದ್ದು ಅನಂತರ ಮೂರು ವರ್ಷಗಳ ಅವಧಿಗೆ ಸಮಿತಿಯನ್ನು ಪುನರ್ ರಚಿಸಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಕಳಿಸಿತ್ತು. ವಿಶೇಷ ಜಿಲ್ಲಾಧಿಕಾರಿಗಳು ಶ್ರೀ ಅಡವಪ್ಪ ಇವರನ್ನು ಕನ್ವೀನರ್‌ಯಾಗಿ ನೇಮಕ ಮಾಡಿ ಆದೇಶ ನೀಡಿದ್ದರು. ನಂತರ ಶ್ರೀ ಅಡವಪ್ಪನವರು ತಹಸೀಲ್ದಾರ್‌ರವರನ್ನು ಭೇಟಿ ಮಾಡಿ, ಶ್ರೀ ಬಸವರಾಜಪ್ಪನವರನ್ನು ಕನ್ವೀನರ್ ಆಗಿ ನೇಮಕ ಮಾಡಲು ಕೋರಿದ್ದರ ಮೇರೆ ಮಂಜಿನ ಕ್ರಮಕ್ಕೆ ವಿಶೇಷ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗಿತ್ತು. ವಿಶೇಷ ಜಿಲ್ಲಾಧಿಕಾರಿಗಳು ಧಾರ್ಮಿಕ ದತ್ತಿ ಆಯುಕ್ತರಿಗೆ ಬರೆದಿರುತ್ತಾರೆ. ಈ ಕಾರಣದಿಂದಾಗಿ, ದಿನಾಂಕ ೨೮–೧೨–೧೯೮೩ರಂದು ಮತ್ತು ದಿನಾಂಕ ೨೪–೧೨–೧೯೮೪ರಂದು ಸಣ್ಣ ರಿಪೇರಿ ಕೆಲಸವನ್ನು ದೇವಸ್ಥಾನದ ಕೆಲಸ ನಿಂತು ಹೋಗದಂತೆ ನೋಡಿಕೊಳ್ಳಲು ಮತ್ತು ಶಿವರಾತ್ರಿ ಹಬ್ಬದ ಪ್ರಯುಕ್ತ ಸಣ್ಣ ರಿಪೇರಿ ಮತ್ತು ಸುಣ್ಣ ಬಳಿಸುವ ಕೆಲಸ ಮಾಡಿಸಲು ಶ್ರೀ ಬಸವರಾಜಪ್ಪನವರಿಗೆ ಹಣ ಕೊಡಲಾಗಿತ್ತು.